## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಶಂಕರ ತಂದೆ ಸಂಗಪ್ಪಾ, ಅಧ್ಯಕ್ಷರು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ:ಜಿಪಕ/ಪಕಾ/ಗ್ರಾಪಂ/131/2015-16/478ದಿನಾಂಕ:24.08.2016.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ:685:ಗ್ರಾಪಂಅ:2016, ದಿನಾಂಕ:17.10.2016 ರ ಕಾರಣ ಕೇಳುವ ನೋಟಿಸ್ಸು.
3. ಶ್ರೀ ಶಂಕರ ತಂದೆ ಸಂಗಪ್ಪಾ, ಅಧ್ಯಕ್ಷರು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 08.11.2016.
4. ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ ಸಂಖ್ಯೆ: ದಿನಾಂಕ: 27.01.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಮ್ಮ ಪ್ರಸ್ತಾವನೆಯಲ್ಲಿ, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೇಲೆ ಸಲ್ಲಿಸಿರುವ ದೂರಿನ ಕುರಿತು ಸಹಾಯಕ ಆಯುಕ್ತರು, ಸೇಡಂ ಇವರಿಂದ ವರದಿ ಪಡೆಯಲಾಗಿದೆ. ಸದರಿ ವರದಿಯನ್ನು ಪರಿಶೀಲಿಸಲಾಗಿ ಸಹಾಯಕ ಆಯುಕ್ತರು, ಸೇಡಂ ಇವರು ದಿನಾಂಕ:13.06.2016 ರಂದು ವಿಚಾರಣೆ ಮಾಡಲಾಗಿದ್ದು, ವಿಚಾರಣೆ ವೇಳೆಯಲ್ಲಿ ಹಾಜರಿದ್ದ ಸದರಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರು ಈ ಮೊದಲು ನೀಡಿರುವ ಹೇಳಿಕೆಗಳನ್ನು ಮುಂದುವರೆಸಿ, ಗ್ರಾಮ ಸಭೆಯನ್ನು ಕಾನೂನು ಬಾಹಿರವಾಗಿ ಮಾಡಿರುತ್ತಾರೆ. ಸುಮಾರು 10 ತಿಂಗಳಿಂದ ಯಾವುದೇ ಅಭಿವೃದ್ಧಿ ಕೆಲಸಗಳು ಮಾಡದೇ ಬೋಗಸ್ ವೋಚರಗಳು ಸೃಷ್ಟಿಸಿರುತ್ತಾರೆ. ಅಂದಾಜು ಪಟ್ಟಿ ತೋರಿಸದೆ ಹಣ ಲೂಟಿ ಮಾಡಿರುತ್ತಾರೆ. ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಪರ್ಸಿಗಳನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಂಡಿರುತ್ತಾರೆ. ಪ್ರಯುಕ್ತ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸೇರಿ ಪಂಚಾಯತ್ ರಾಜ್ ಕಾಯ್ದೆಯನ್ನು ಉಲ್ಲಂಘಿಸಿರುತ್ತಾರೆ. ಸದರಿ ಗ್ರಾಮ ಪಂಚಾಯಿತಿ ಸದಸ್ಯರುಗಳು ಅಧ್ಯಕ್ಷ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರ ಮೇಲೆ ಹೊರಡಿಸಿದ ಆರೋಪಗಳ ಕುರಿತು ಯಾವುದೇ ಲಿಖಿತ ಉತ್ತರ ನೀಡಿರುವುದಿಲ್ಲ. ಆದರೆ ಅಧ್ಯಕ್ಷರ ವಿರುದ್ಧ ಇನ್ನೊಂದು ಎಫ್.ಐ.ಆರ್. ದಾಖಲಾಗಿದ್ದು ಅದು ಐಪಿಸಿ ಕಲಂ 34, 504 & 306 ರ ಬಗ್ಗೆ ಇರುತ್ತದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು ಈ ಪ್ರಕರಣಕ್ಕೆ ಕುರಿತಂತೆ ಮಾನ್ಯ ಪ್ರಾದೇಶಿಕ ಆಯುಕ್ತರು, ಸುಮಾರು (09) ಅಂಶಗಳ ಕುರಿತು ಸವಿಸ್ತಾರವಾದ ವರದಿಯಲ್ಲಿ ಸಾರ್ವಜನಿಕ ಅನುದಾನವನ್ನು ದುರುಪಯೋಗಿಸಿಕೊಂಡು ಕರ್ನಾಟಕ ಪಂಚಾಯತ್ ಕಾಯ್ದೆ ಹಾಗೂ ನ.ರೆ.ಗಾ. ಕಾಯ್ದೆಯಡಿ ಸರ್ಕಾರಿ ನೌಕರಿಗಲ್ಲದ ರೀತಿಯಲ್ಲಿ ನಡೆದು ಕೊಂಡಿರುವುದರಿಂದ, ಸದರಿ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರ ಮೇಲೆ ಕ್ರಮ ಜರುಗಿಸುವುದು ಸೂಕ್ತವೆಂದು ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಿರುವುದರಿಂದ ಸದರಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರ ಮೇಲೆ ಪ್ರತ್ಯೇಕವಾಗಿ ಜಿಲ್ಲಾ ಪಂಚಾಯತ್ ಕಚೇರಿಯ ಆಡಳಿತ ಶಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆಂದು ತಿಳಿಸಿರುತ್ತಾರೆ. ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಗ್ರಾಮ ಪಂಚಾಯಿತಿಯಲ್ಲಿ ಅವ್ಯವಹಾರ ಮಾಡಿರುವುದು ಸಹಾಯಕ ಆಯುಕ್ತರು, ಸೇಡಂ ಇವರ ವರದಿಯಿಂದ ಸಾಬೀತಾಗಿರುವುದರಿಂದ ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ43(ಎ) & 48(4) ರಂತೆ ಮುಂದಿನ ಕ್ರಮಕ್ಕಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ಮತ್ತು 48(4) ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿಯವರು 2014-15 ನೇ ಸಾಲಿನ 13 ನೇ ಹಣಕಾಸು ಯೋಜನೆಯಡಿ ಆಗಿರಬಹುದಾದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಅವರ ಮೇಲೆ ಬಂದಿರುವ ಆರೋಪವು ಅವರಿಗೆ ಅನ್ವಯ ವಾಗುವುದಿಲ್ಲವೆಂದು, ಅ ಅವಧಿಯಲ್ಲಿ ಅವರು ಅಧ್ಯಕ್ಷರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. 2014-15 ಮತ್ತು 2015-16 ನೇ ಸಾಲಿನ 13 ನೇ ಹಣಕಾಸು ಯೋಜನೆಯಲ್ಲಿ ಯಾವುದೇ ಅವರ ನಿರ್ವಹಣೆ ಇರುವುದಿಲ್ಲವೆಂದು, 2015-16 ನೇ ಸಾಲಿನಲ್ಲಿ 14 ನೇ ಹಣಕಾಸು ಯೋಜನೆಯ ರೂ.7,32,646/- ಜಮಾವಾಗಿದ್ದು, ಅದರಲ್ಲಿ ರೂ.7,17,658/- ಖರ್ಚಾಗಿದ್ದು, ಇದರಲ್ಲಿ 22 ಕಾಮಗಾರಿಗಳು ಇದ್ದು, 11 ಕಾಮಗಾರಿಗಳು ಮುಕ್ತಾಯವಾಗಿದ್ದು, ಎಲ್ಲಾ ಕಾಮಗಾರಿಗಳನ್ನು ಗಾಂಧಿ ಸಾಕ್ಷಿಯಲ್ಲಿ ಅಳವಡಿಸಿ ಕಿರಿಯ ಅಭಿಯಂತರರು ನಾಗಾಯಿದ್ಲಾಯಿ, ಇವರ ಅಂದಾಜು ಪಟ್ಟಿ ಮತ್ತು ಎಂ.ಬಿ. ಬಿಲ್ಲಿನ ಮೇಲೆ ನಾವು ಮೇಲ್ಕಂಡ ಕಾಮಗಾರಿಗಳ ಬಿಲ್ಲು ಪಾವತಿಸಿರುವುದಾಗಿ ನಿಧಿ-1 ಮತ್ತು ನಿಧಿ-2 ಯೋಜನೆಯಡಿಯಲ್ಲಿ ಕಾನೂನು ಬದ್ಧವಾಗಿ ಕುಡಿಯುವ ನೀರು ನಿರ್ವಹಣೆಗಾಗಿ ಮತ್ತು ಸಿಬ್ಬಂದಿಯ ವೇತನ ಪಾವತಿ ಸಲುವಾಗಿ ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾರೆ.

2014-15ನೇ 2015-16ನೇ ಸಾಲಿನ ಸದರಿ ಗ್ರಾಮ ಪಂಚಾಯಿತಿಯಲ್ಲಿರುವ ಒಟ್ಟು 27 ಬೋರ್‌ವೆಲ್‌ಗಳಲ್ಲಿ, 7 ಗ್ರಾಮಗಳ ನಿರ್ವಹಣೆಗಾಗಿ ಒಟ್ಟು ಖರ್ಚಾಗಿದ್ದ ಮೊತ್ತ ರೂ.34,31,367/- ಎಂದು ತಿಳಿಸಿರುತ್ತಾರೆ. ಈ ಅವಧಿಯಲ್ಲಿ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿರುವುದಿಲ್ಲ. 14 ನೇ ಹಣಕಾಸು ಯೋಜನೆಯಡಿಯಲ್ಲಿ 2 ಬೋರ್‌ವೆಲ್‌ಗಳನ್ನು ಕೊರೆಯಲಾಗಿದ್ದು, ಅದು ಮಾತ್ರ ಅವರ ಅವಧಿಯಲ್ಲಿ ಆಗಿರುವ ಕಾಮಗಾರಿಯಾಗಿದ್ದು ಇದರ ಬಿಲ್‌ನ್ನು ಗಾಂಧಿ ಸಾಕ್ಷಿಯಲ್ಲಿ ಆಳವಡಿಸಲಾಗಿದೆ ಎಂದು ತಿಳಿಸಿರುತ್ತಾರೆ. 2014-15 ನೇ ಸಾಲಿನ 13 ನೇ ಹಣಕಾಸು ಯೋಜನೆಯಡಿಯಲ್ಲಿ ಒಟ್ಟು 11 ಕಾಮಗಾರಿಗಳಿಗೆ ಮಾತ್ರ ಹಣ ಖರ್ಚು ಮಾಡಿದ್ದು, ಸದರಿ ಕಾಮಗಾರಿಗಳ ಕಡತ ಬಿಲ್ ಮತ್ತು ರಸೀದಿಗಳು ಓಚರಗಳು, ತನಿಖಾ ವರದಿಯಲ್ಲಿ ತೋರಿಸಿರುವುದಿಲ್ಲವೆಂಬ ಆರೋಪಕ್ಕೆ ಸಂಬಂಧಿಸಿದಂತೆ ಅವರು ಜವಾಬ್ದಾರರಲ್ಲವೆಂದು, ಅ ಅವಧಿಯಲ್ಲಿ ಅವರು ಅಧ್ಯಕ್ಷರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

2015-16 ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ಜಲಾನಯನ ಇಲಾಖೆಗೆ ಸಂಬಂಧಿಸಿದಂತೆ, ಕೊಳ್ಳೂರು ಗ್ರಾಮದಲ್ಲಿ ಬದು ಹಾಕುವ ಕಾಮಗಾರಿಯ ಕಡತ ನಿರ್ವಹಣೆಯ ಜವಾಬ್ದಾರಿಯು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರದ್ದಾಗಿರುವುದರಿಂದ ಕಡತ ನಿರ್ವಹಣೆ ಸರಿಯಾಗಿ ಮಾಡಿರುವುದಿಲ್ಲವೆಂಬ ಆರೋಪದಿಂದ ಅವರನ್ನು ಕೈ ಬಿಡುವಂತೆ ತಿಳಿಸಿರುತ್ತಾರೆ.

ಇಂದಿರಾ ಆವಾಜ್ ಬಸವ ವಸತಿ ಯೋಜನೆಯಡಿಯಲ್ಲಿ ಮನೆಗಳು ಮಂಜೂರಾಗಿದ್ದು, ಜಿ.ಪಿ.ಎಸ್ ಮಾಡಿರುವುದಿಲ್ಲ, ಮನೆಗಳ ಹಂಚಿಕೆಯಲ್ಲಿ ಸುಳ್ಳು ಫಲಾನುಭವಿಗಳ ಆಯ್ಕೆ ಪಟ್ಟಿ ತಯಾರಿಸಲಾಗಿದೆಂದು, ಗ್ರಾಮ ಸಭೆ ನಡೆಸದೆ, ಗ್ರಾಮ ಸಭೆ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಸೃಷ್ಟಿಸಿರುತ್ತಾರೆಂದು ಆರೋಪಿಸಿರುತ್ತಾರೆ, ಆರೋಪಕ್ಕೆ ಸಂಬಂಧಿಸಿದಂತೆ ಅವರು ಜವಾಬ್ದಾರರಲ್ಲವೆಂದು, ಅ ಅವಧಿಯಲ್ಲಿ ಅವರು ಅಧ್ಯಕ್ಷರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಪಂಚಾಯಿತಿ ಕಾರ್ಯಾಲಯದ ರಿಪೇರಿಗಾಗಿ ಅನುದಾನವನ್ನು ಉಪಯೋಗಿಸಲಾಗಿದ್ದು, ಕೆಲವು ವಸ್ತುಗಳನ್ನು ಪಂಚಾಯಿತಿಯ ಅಧ್ಯಕ್ಷರು ಸ್ವತಃ ಮನೆಗೆ ಉಪಯೋಗಿಸಿಕೊಂಡಿದ್ದಾರೆಂಬ ಆರೋಪವಿರುತ್ತದೆ, ರಾಜ್ ಕಾಯ್ದೆ ಪ್ರಕಾರ ಪ್ರೇಮ್‌ಕುಮಾರ್ ಗುತ್ತೇದಾರ್ ಇವರು ಈ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ ಮತ್ತು ಕಿರಿಯ ಅಭಿಯಂತರರು ಬಿಲ್ಲಿನ ಎಂ.ಬಿ ತಯಾರಿಸಿದ್ದು, ಕಾಮಗಾರಿಯನ್ನು ಗಾಂಧಿ ಸಾಕ್ಷಿ ಕಾಯಕಕ್ಕೆ ಆಳವಡಿಸಿದ್ದು ಗುತ್ತಿಗೆದಾರರಿಗೆ ಬಿಲ್ ಪಾವತಿಸಲಾಗಿದೆ. ಈ ವಿಚಾರದಲ್ಲಿ ಆಗಿರಬಹುದಾದ ಅವ್ಯವಹಾರಗಳಿಗೆ ಸಂಬಂಧಪಟ್ಟಂತೆ ಅವರ ಜವಾಬ್ದಾರಿಗಳು ಯಾವುದು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಹಿಂದಿನ ಅವಧಿಯಲ್ಲಿ ಆಗಿರಬಹುದಾದ ಆರೋಪಗಳಿಗೆ ಅವರು ಜವಾಬ್ದಾರರಾಗಿರುವುದಿಲ್ಲವೆಂದು ತಿಳಿಸಿ ಇವರ ಅವಧಿಯಲ್ಲಿ ಯಾವುದೇ ಇಂತಹ ಅವ್ಯವಹಾರಗಳು ಆಗಿರುವುದಿಲ್ಲವೆಂದು, ದಿನಾಂಕ:20.06.2012 ರಲ್ಲಿ ಚಿಂಚೋಳಿ ಪೋಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದ್ದು, ಅದು ಐ.ಪಿ.ಸಿ ಕಲಂ 34, 504, 306, ಬಗ್ಗೆ ವಿವರಣೆ ಮಾಡಿ ಪೋಲೀಸ್ ಬಿ ರಿಪೋರ್ಟ್ ಸಲ್ಲಿಸಿರುತ್ತಾರೆಂದು, ಅವರ ಮೇಲಿನ ಆರೋಪಗಳನ್ನು ಕೈಬಿಡುವಂತೆ ಮನವಿ ಮಾಡಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ವಿಚಾರಣೆಯನ್ನು ದಿನಾಂಕ:09.02.2017 ರಂದು ಅಪರಾಹ್ನ 3:00 ಘಂಟೆಗೆ ನಿಗದಿಗೊಳಿಸಲಾಗಿದ್ದು, ಸದರಿ ವಿಚಾರಣೆಗೆ ಸದರಿಯವರು ಹಾಜರಿರುತ್ತಾರೆ ಹಾಗೂ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ: 15.07.2017 ರಂದು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರ ವರದಿ ಹಾಗೂ ಸದರಿಯವರು ನೀಡಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ಸರ್ಕಾರವು ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು ಶ್ರೀ ಶಂಕರ ತಂದೆ ಸಂಗಪ್ಪಾ, ಅಧ್ಯಕ್ಷರು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ, ರವರು ಗಾಂಧಿ ಸಾಕ್ಷಿ ಕಾಯಕದ ತಂತ್ರಾಂಶ ಆಳವಡಿಸಿ ಕೊಂಡು ಯಾವುದೇ ಕಾರ್ಯಕ್ರಮ upload ಮಾಡದಿರುವ ಹಿನ್ನೆಲೆಯಲ್ಲಿ ಸದರಿಯವರ ಮೇಲಿನ ಆರೋಪವು ದೃಢಪಟ್ಟಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/685/ಗ್ರಾಪಂಕಾ/2016**

**ಬೆಂಗಳೂರು, ದಿನಾಂಕ:-04-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಶಂಕರ ತಂದೆ ಸಂಗಪ್ಪಾ, ಅಧ್ಯಕ್ಷರು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ ಆಳವಡಿಸಿಕೊಂಡು ಯಾವುದೇ ಕಾರ್ಯಕ್ರಮ upload ಮಾಡದಿರುವ ಹಿನ್ನೆಲೆಯಲ್ಲಿ ಸದರಿಯವರ ಮೇಲಿನ ಆರೋಪ ದೃಢಪಟ್ಟಿರುವುದರಿಂದ ಚಿಂಚೋಳಿ ತಾಲ್ಲೂಕು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

**(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)**
**ಗ್ರಾಅಪ ಇಲಾಖೆ ರವರಿಂದ ಅನುಮೋದಿತ)**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:-

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.

4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.
5. ಶ್ರೀ ಶಂಕರ ತಂದೆ ಸಂಗಪ್ಪಾ, ಅಧ್ಯಕ್ಷರು, ನಾಗಾಯಿದ್ಲಾಯಿ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
7. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.